ಭವನ ಕಟ್ಟಡ ಪ್ರಾರಂಭಿಸಲಾಗುವುದು. ಸದರಿ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರ ಬಳ್ಳಾರಿ ಇವರಿಗೆ ವಹಿಸಿಕೊಡಲಾಗಿದೆ.

ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಮಂಜೂರಾಗಿರುವ ಅಂಬೇಡ್ಕರ್ ಮತ್ತು ಜಗಜೀವನರಾಮ್ ಸಮುದಾಯ ಭವನಗಳ ನಿರ್ಮಾಣದ ವಿವರವನ್ನು ಅನುಬಂಧ–4ರಲ್ಲಿ ನೀಡಲಾಗಿದೆ.

ಹೊಸ ಮಾದರಿ ಬಸ್ಸುಗಳು

1651(1861); ಶ್ರೀ ನಾಗರಾಜಯ್ಯ ಡಿ. (ಕುಣಿಗಲ್)

ಅ) ಕುಣಿಗಲ್ ವಿಧಾನಸಭಾ ಟೌನ್ ವ್ಯಾಪ್ತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಘಟಕ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಒದಗಿಸಲಾಗಿರುವ ಬಸ್‌ಗಳ ಸಂಖ್ಯೆಯೆಷ್ಟು;

ಆ) ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಕಿ.ಮೀ. ಪ್ರಯಾಣಿಸಿದ ಬಸ್ಸುಗಳು ಇನ್ನೂ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕುಣಿಗಲ್ ಘಟಕಕ್ಕೆ ಹೊಸ ಮಾದರಿಯ ಬಸ್ಸುಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು)

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಕ.ರಾ.ರ.ಸಾ.ನಿಗಮದ ಕುಣಿಗಲ್ ಘಟಕಕ್ಕೆ 1998ರಿಂದ ಇಲ್ಲಿಯವರೆವಿಗೂ ಒಟ್ಟು 256 ಹೊಸ ವಾಹನಗಳನ್ನು ಒದಗಿಸಲಾಗಿರುತ್ತದೆ.

ಆ) ಕ.ರಾ.ರ.ಸಾ. ನಿಗಮದ ನಿಯಾಮಾವಳಿಯಂತೆ 9.00 ಲಕ್ಷ ಮೀರಿ ಕ್ರಮಿಸಿರುವ ವಾಹನಗಳ ಭೌತಿಕ / ತಾಂತ್ರಿಕ ಸ್ಥಿತಿಯನ್ನು ಪರಿಶೀಲಿಸಿ ನಿರುಪಯುಕ್ತಗೊಳಿಸುವ ಪದ್ಧತಿ ರೂಡಿಯಲ್ಲಿ ಇರುತ್ತದೆ.

ತುಮಕೂರು ವಿಭಾಗದ ಕುಣಿಗಲ್ ಘಟಕಕ್ಕೆ ಜನವರಿ–15ರ ಮಾಹೆಯ ಅಂತ್ಯಕ್ಕೆ 9.00 ಲಕ್ಷ ಮೀರಿ ಕ್ರಮಿಸಿರುವ ವಾಹನಗಳು ಕಾರ್ಯಾಚರಣೆಯಲ್ಲಿ ಇರುವುದಿಲ್ಲ.

ಇ) 2014–15ನೇ ಸಾಲಿನಲ್ಲಿ 09 ಹೊಸ ವಾಹನಗಳನ್ನು ಕುಣಿಗಲ್ ಘಟಕಕ್ಕೆ ನಿಯೋಜಿಸಲಾಗಿರುತ್ತದೆ.

ಸಂಚಾರ ಇಲಾಖೆಯಿಂದ, ವಿಭಾಗದಿಂದ ಬರುವ ಬೇಡಿಕೆ ಮತ್ತು ಹೆಚ್ಚುವರಿ ವಾಹನಗಳ ಶೇಕಡವಾರು ಪರಿಮಾಣಕ್ಕೆ ಅನುಗುಣವಾಗಿ ಹೊಸ ವಾಹನಗಳನ್ನು ಪೂರೈಸಲಾಗುತ್ತಿದೆ.

ಬಿ.ಪಿ.ಎಲ್ ಪಡಿತರ ಹಂಚಿಕೆ ಸ್ಥಗಿತಗೊಂಡಿರುವುದು

1652(1862); ಶ್ರೀ ನಾಗರಾಜಯ್ಯ ಡಿ. (ಕುಣಿಗಲ್)

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿಪಿಎಲ್ ಪಡಿತರ ಚೀಟಿಗಳ ಹಂಚಿಕೆಯು ಸ್ಥಗಿತಗೊಂಡಿರುವುದರಿಂದ ಕಡು ಬಡವರಿಗೆ ಪಡಿತರ ದೊರೆಯದೇ ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಿಪಿಎಲ್ ಪಡಿತರ ಚೀಟಿ ನೀಡುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು);

ಇ) ಅನರ್ಹರಿಗೆ ಬಿಪಿಎಲ್ ಕಾರ್ಡು ವಿತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈಗಾಗಲೇ ವಿತರಿಸಿರುವ ಅನರ್ಹ ಬಿಪಿಎಲ್ ಪಡಿತರ ರದ್ದುಪಡಿಸಿ, ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ವಿತರಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು (ಮಾಹಿತಿ ನೀಡುವುದು)?